ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No:0821-2417107

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID: gmtech@cescmysore.org

Company Identity Number[CIN]:- **U40109KA2004SGC035177**

**ಸಂಖ್ಯೆ: ಚಾವಿಸನಿನಿ/ಪ್ರವ್ಯ(ತಾ)/ಉಪ್ರವ್ಯ(ಎಂಐಎಸ್)/ಸಪ್ರವ್ಯ-2/ವ್ಯ/22-23/** 13138-41 **ದಿನಾಂಕ:** 20 SEP 2022

ಮುಖ್ಯ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನಾ ವಲಯ,
ಚಾವಿಸನಿನಿ, ಮೈಸೂರು.

ಮಾನ್ಯರೇ,

**ವಿಷಯ:** ಚಿಕ್ಕಕಾನ್ಯ ಸರ್ಕಾರಿ ಶಾಲಾ ಅವರಣದಲ್ಲಿ ಹಾದು ಹೋಗಿರುವ 66 ಕೆ.ವಿ ಕಡಕೋಳ – ಸರಗೂರು ಜೋಡಿ ಮಾರ್ಗಗಳ ಮಾರ್ಗ ಮಾರ್ಗಮುಕ್ತತೆಗೆ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:** 1. ಮುಇಂ(ವಿ)/ಅಇಂ(ವಿ)/ಸಇಂ(ಕ)-1/4136-40 ದಿನಾಂಕ:19.09.2022.
2. ನಿರ್ದೇಶಕರು(ತಾಂತ್ರಿಕ)ರವರ ಅನುಮೋದಿತ ಟಿಪ್ಪಣಿ ದಿನಾಂಕ: 19.09.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು ರವರು ದಿನಾಂಕ: 21.09.2022 ಮತ್ತು 22.09.2022 ರಂದು ಬೆಳಗ್ಗೆ 09:00 ರಿಂದ ಸಂಜೆ 6:00 ಘಂಟೆಯವರೆಗೆ ನಂಜನಗೂಡು ತಾಲ್ಲೂಕು, ಚಿಕ್ಕಕಾನ್ಯ ಸರ್ಕಾರಿ ಶಾಲಾ ಅವರಣದಲ್ಲಿ ಹಾದು ಹೋಗಿರುವ 66 ಕೆ.ವಿ ಕಡಕೋಳ – ಸರಗೂರು ಜೋಡಿ ಮಾರ್ಗದಲ್ಲಿ ನೂತನವಾಗಿ ಒಂದು ಸಂಖ್ಯೆಯ ಗೋಪುರವನ್ನು ನಿರ್ಮಾಣ ಮಾಡಿ ಮಾರ್ಗವನ್ನು ಎತ್ತರಿಸುವ ಕಾಮಾಗಾರಿಯನ್ನು ಹಮ್ಮಿಕೊಳ್ಳಲು ಮಾರ್ಗ ಮುಕ್ತತೆಯನ್ನು ನೀಡುವಂತೆ ಹಾಗೂ 66 ಕೆವಿ ಮಾರ್ಗದ ಜಂಪ್ ಜೋಡಣೆ ಮಾಡುವ ಸಂದರ್ಭದಲ್ಲಿ 2 ಗಂಟೆಗಳ ಕಾಲ ಜಯಪುರ, ಹಂಪಾಪುರ, ಯರೇಹಳ್ಳಿ ಹ್ಯಾಂಡ್ ಪೋಸ್ಟ್, ಹೆಚ್.ಡಿ.ಕೋಟೆ, ಅಂತರಸಂತೆ ಮತ್ತು ಸೋಗ್ಗಹಳ್ಳಿ ವಿದ್ಯುತ್ ಉಪಕೇಂದ್ರಗಳ ಅಡಚಣೆ ಉಂಟಾಗಲಿದ್ದು, ನಂತರ ಬೇಗೂರು-ಸರಗೂರು ಮಾರ್ಗ ಮುಖಾಂತರ ವಿದ್ಯುತ್ ಸರಬರಾಜು ನೀಡಲಾಗುವುದೆಂದು ಕೋರಿರುತ್ತಾರೆಂದು ತಿಳಿಸೀರುತ್ತೀರಿ.

ಮುಂದುವರೆದು, ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಮೈಸೂರು ರವರು ಮೇಲ್ಕಂಡ ಕಾಮಗಾರಿಗೆ ಈ ಕೆಳಕಂಡ ದಿನಾಂಕಗಳಂದು ಮಾರ್ಗಮುಕ್ತತೆಗೆ ನೀಡುವಂತೆ ಶಿಫಾರಸ್ಸು ಮಾಡಿರುತ್ತಾರೆಂದು ತಿಳಿಸಿ ತಾವು ಸಹ ಮಾರ್ಗಮುಕ್ತತೆಗೆ ಶಿಫಾರಸ್ಸು ಮಾಡಿರುತ್ತೀರಿ.

| ಪ್ರಸರಣ ಮಾರ್ಗದ ಹೆಸರು | ಮಾರ್ಗ ಮುಕ್ತತೆಯ ದಿನಾಂಕ ಮತ್ತು ಸಮಯ | ಷರಾ |
|---|---|---|
| 66 ಕೆ.ವಿ ಕಡಕೋಳ – ಸರಗೂರು ಜೋಡಿ ಮಾರ್ಗ (ಚಿಕ್ಕಕಾನ್ಯ ಸರ್ಕಾರಿ ಶಾಲೆ) | ದಿನಾಂಕ: 21.09.2022 ಮತ್ತು 22.09.2022 ರಂದು ಬೆಳಗ್ಗೆ 09:00 ರಿಂದ ಸಂಜೆ 6:00 ಘಂಟೆಯವರೆಗೆ | 66/11 kV Jaypura and Hampapura S/s load can be transferred to 220kV Begur R/s via 66kv Kadakola-Saragur line-1 after jumper closed at Chandrawadi LILO tower and jumper open near chikka kanya limits (66kV Jayapura, Hampapura, Yarehalli hand post, H.D.Kote, Antharasanthe and Soggahalli LIS will be interrupt for about 02 hour during jumper open and close) |

ಆದುದರಿಂದ, ದಿನಾಂಕ: 21.09.2022 ಮತ್ತು 22.09.2022 ರಂದು ನಂಜನಗೂಡು ತಾಲ್ಲೂಕು, ಚಿಕ್ಕಕಾನ್ಯ ಸರ್ಕಾರಿ ಶಾಲಾ ಅವರಣದಲ್ಲಿ ಹಾದು ಹೋಗಿರುವ 66 ಕೆ.ವಿ ಕಡಕೋಳ – ಸರಗೂರು ಜೋಡಿ ಮಾರ್ಗದಲ್ಲಿ ನೂತನವಾಗಿ ಒಂದು ಸಂಖ್ಯೆಯ ಗೋಪುರವನ್ನು ನಿರ್ಮಾಣ ಮಾಡಿ ಮಾರ್ಗವನ್ನು ಎತ್ತರಿಸುವ ಕಾಮಾಗಾರಿಯನ್ನು ಹಮ್ಮಿಕೊಳ್ಳಲು ಮಾರ್ಗಮುಕ್ತತೆಗೆ ನಿರ್ದೇಶಕರು(ತಾಂತ್ರಿಕ) ರವರು ಉಲ್ಲೇಖ(2) ರಲ್ಲಿ ಅನುಮೋದಿಸಿರುತ್ತಾರೆ.

ಈ ನಿಟ್ಟಿನಲ್ಲಿ, ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ ರವರು, ಮಾರ್ಗಮುಕ್ತತೆಯ ದಿನದಂದು ಐ.ಪಿ ಸ್ಥಾವರಗಳಿಗೆ ಬದಲಾದ ಸಮಯದಲ್ಲಿ ವಿದ್ಯುತ್ ಪೂರೈಸುವಂತೆ ಕ್ರಮ ವಹಿಸಲು, ಕೋವಿಡ್ ಕೇರ್ ಸೆಂಟರ್ ಆಸ್ಪತ್ರೆಗಳಿಗೆ ಬದಲಿ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲು ಹಾಗೂ ಗ್ರಾಹಕರುಗಳಿಗೆ ವಿದ್ಯುತ್ ವ್ಯತ್ಯಯದ ಮಾಹಿತಿಯನ್ನು ಮುಂಚಿತವಾಗಿ ಪತ್ರಿಕಾ ಪ್ರಕಟಣೆಯ ಮೂಲಕ ತಲುಪಿಸಲು ಮತ್ತು ಸದರಿ ದಿನಾಂಕದಂದು ಕೇಂದ್ರ ಸ್ಥಾನದಲ್ಲೇ ಇದ್ದು ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಲೋಡ್ ಮಾನಿಟರಿಂಗ್ ಮಾಡುವಂತೆ ಸೂಚಿಸಲು ನಿರ್ದೇಶಿಸಲ್ಪಟ್ಟಿರುತ್ತೇನೆ.

**ಸೂಚನೆ: ಮೇಲೆ ತಿಳಿಸಿರುವ ಮಾರ್ಗಮುಕ್ತತೆಯ ದಿನಾಂಕಗಳಂದು ಯಾವುದೇ ಸರ್ಕಾರಿ ಕಾರ್ಯಕ್ರಮಗಳು/ಪರೀಕ್ಷೆಗಳಿದ್ದಲ್ಲಿ ಸದರಿ ದಿನಾಂಕದಂದು ಮಾರ್ಗಮುಕ್ತತೆಯು ರದ್ದಾಗುವುದೆಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.**

ತಮ್ಮ ವಿಶ್ವಾಸಿ

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಚಾ.ವಿ.ಸ.ನಿ.ನಿ, ಮೈಸೂರು

<u>ಪ್ರತಿಗಳು:</u>

1. ಮುಖ್ಯ ಇಂಜಿನಿಯರ್(ವಿ) ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು.
2. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಮೈಸೂರು, ಚಾವಿಸನಿನಿ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಡಿಸಿಸಿ, ಚಾವಿಸನಿನಿ, ಮೈಸೂರು.
4. ಆ.ಸ/ತಾ.ಸ., ವ್ಯನಿ/ನಿ(ತಾಂ). ರವರು ಇದನ್ನು ಮಾನ್ಯ ವ್ಯನಿ/ನಿ(ತಾಂ) ರವರ ದಯಾಪರ ಗಮನಕ್ಕೆ ತರಲು ಕೋರಲಾಗಿದೆ.

ಮುಖ್ಯ ಕಡತ/ ಕಛೇರಿ ಪ್ರತಿ.